ESI.A.No.48/2021

RW-1,

ದಿನಾಂಕಃ 09-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ. RS ವಕೀಲರಿಂದ

ದಿಃ1-9-2016 ರಂದು ಮಡಿಕೇರಿ ಪ್ರದೇಶವನ್ನು ಇ ಎಸ್ ಐ ವ್ಯಾಪ್ತಿಯೊಳಗೆ ಸೇರಿಸಿಕೊಳ್ಳಲಾಗಿರುತ್ತದೆ. ಅರ್ಜಿದಾರರು ಎಜುಕೇಶನಲ್ ಇನ್ಸಿಟ್ಯೂಷನ್ ಆಗಿರುತ್ತದೆ ಎಂದರೆ ಸರಿ .ಇ ಎಸ್ ಐ ಕೋಡ್ ನಂಬರನ್ನು ಅರ್ಜಿದಾರರ ಸಂಸ್ಥೆ ಪಡೆದುಕೊಂಡಿರುವುದಿಲ್ಲ ಸರ್ವೆ ಮಾಡಿದ ನಂತರ ಇ ಎಸ್ ಐ ಕೋಡನ್ನು ಕಾರ್ಪೋರೇಶನ್ನೇ ಅರ್ಜಿದಾರರ ಸಂಸ್ಥೆಗೆ ನೀಡಿರುತ್ತದೆ. 2016 ನೇ ಇಸವಿಯಲ್ಲಿ ಇ ಎಸ್ ಐ ಕೋಡನ್ನು 25 ಜನ ಎಂಪ್ಲಾಯೀಸ್ ಗಳಿಗೆ ಅರ್ಜಿದಾರರ ಸಂಸ್ಥೆಗೆ ನೀಡಲಾಗಿರುತ್ತದೆ ಎಂದರೆ ಸರಿ . ಸದರಿ 25 ಎಂಪ್ಲಾಯೀಸ್ ಗಳಲ್ಲಿ ಟೀಚಿಂಗ್ ಮತ್ತು ನಾನ್ ಟೀಚಿಂಗ್ ಸ್ಟಾಫ್ಗಳು ಒಳಗಾಗಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಅಟೆಂಡೆನ್ಸ ರಿಜಿಸ್ಟರ್ ನಲ್ಲಿ 25 ಜನರ ಹೆಸರುಗಳಿದ್ದವು ಆದರೆ ಅದರಲ್ಲಿ ಟೀಚಿಂಗ್ ಮತ್ತು ನಾನ್ ಟೀಚಿಂಗ್ ಸ್ಟಾಫ್ ಗಳ ಬಗ್ಗೆ ಪ್ರತ್ಯೇಕ ಮಾಹಿತಿಯನ್ನು ನಮೂದಿಸಲಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 25 ಎಂಪ್ಲಾಯೀಸ್ ಗಳಲ್ಲಿ ಶೇಕಡ 50 ರಷ್ಟು ಇ ಎಸ್ ಐ ವ್ಯಾಪ್ತಿಯಡಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಸುನಾವಣೆಯನ್ನು 12-5-2021, 18-6-2021, 13-7-2021 ಮತ್ತು 5-8-2021 ರಂದು ಕರೆಯಲಾಗಿರುತ್ತದೆ. ಸದರಿ ಸುನಾವಣೆ ಕಾಲಕ್ಕೆ ದೇಶವ್ಯಾಪ್ತಿ ಕೊರೋನಾ ಹಬ್ಬಿತ್ತು ಎಂದರೆ ಸರಿ. ಸದರಿ ಕಾರಣದಿಂದಾಗಿ ಅರ್ಜಿದಾರರು ಸುನಾವಣೆಗೆ ಹಾಜರಾಗಿರುವುದಿಲ್ಲ ಎಂದರೆ ಸರಿ. ಆದುದರಿಂದ ಅರ್ಜಿದಾರರು ಯಾವುದೇ ದಾಖಲಾತಿಗಳನು ಕಾರ್ಪೋರೇಶನ್ನಿಗೆ ನೀಡಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿ. ಹಾಗಾಗಿ ರೂ.6,82,688-00 ಗಳ ವಂತಿಗೆಯನ್ನು ನೀಡುವಂತೆ ಅರ್ಜಿದಾರರಿಗೆ ಸೆಕ್ಷನ್ 45 ಎ ರಡಿಯಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ ಎಂದರೆ ಸರಿ. ನಂತರ 29-11-2021 ರಂದು ಸದರಿ ವಂತಿಗೆಗೆ ರೂ.2,34,891-00 ಬಡ್ಡಿಯನ್ನು ಸೇರಿಸಿ ರೂ.9,17,579-00 ರಂತೆ ಸಿ-19 ರಿಕವರಿ ನೋಟೀಸನ್ನು ನೀಡಲಾಗಿರುತ್ತದೆ ಎಂದರೆ ಸರಿ. ವಂತಿಗೆಯನ್ನು ಅಸ್ಯೂಮ್ಡ ವೇಜಸ್ ಆಧಾರದ ಮೇರೆಗೆ ಲೆಕ್ಕವನ್ನು ಹಾಕಲಾಗಿರುತ್ತದೆ ಎಂದರೆ ಸರಿ. ಅರ್ಜಿದಾರರು ಆಕ್ಚುವಲ್ ವೇಜಸ್ ಮತ್ತು ಆಕ್ಚುವಲ್ ನಂಬರ್ ಆಫ್ ಎಂಪ್ಲಾಯೀಸ್ ಆಧಾರದ ಮೇರೆಗೆ ವಂತಿಗೆಯನ್ನು ಲೆಕ್ಕ ಹಾಕಿ ಕಟ್ಟುತ್ತೇವೆಂದು ಕಾರ್ಪೋರೇಶನ್ ಮುಂದೆ ಬಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರು ಆಕ್ಚುವಲ್ ವೇಜಸ್ ಮೇಲೆ ಮಾತ್ರ ವಂತಿಗೆಯುನ್ನು ಕಟ್ಟಲು ಮಾತ್ರ ಭಾದ್ಯಸ್ಥರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಕ್ಚುವಲ್ ವೇಜಸ್ ಬಗ್ಗೆ ದಾಖಲಾತಿಯಹುನ್ನು ನೀಡದೇ ಇದ್ದ ಕಾರಣ ಅಸೂಮ್ಡ ವೇಜಸ್ ಮೇಲೆ ವಂತಿಗೆಯನ್ನು ಕಟ್ಟಲು ಅರ್ಜಿದಾರರು ಭಾದ್ಯಸ್ಥರಾಗಿರುತ್ತಾರೆ ಎಂದು ನುಡಿಯುತ್ತಾರೆ.

ESI.A.No.48/2021
RW-1,

ಕೊರೋನಾ ಇದ್ದ ಕಾರಣ ಅರ್ಜಿದಾರರು ದಾಖಲಾತಿಗಳನ್ನು ಕಾರ್ಪೋರೇಶನ್ ಮುಂದೆ ಹಾಜರುಪಡಿಸಲು ಸಾಧ್ಯವಾಗಿರುವುದಿಲ್ಲ ಹಾಗಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿಗಳ ಆಧಾರದ ಮೇರೆಗೆ ವಂತಿಗೆಯನ್ನು ಕಟ್ಟಲು ಭಾಧ್ಯಸ್ತರಾಗಿರುತ್ತಾರೆ ಎಂದರೆ ಸರಿಯಲ್ಲ. ಕಾರ್ಪೋರೇಶನ್ನವರು ಮಾಡಿದ ಆದೇಶ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್.ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.